


ನೋಡಿದಾಗ ನಾನೇ ಪರವಾಗಿಲ್ಲ ಅನಿಸುತ್ತೆ. 'ನಾನೇ ಅಪ್ಪ, ನಾನೇ ಅಮ್ಮ' ಅಂತ ಮಗಳಿಗೆ ಹೇಳಿದ್ದೇನೆ. ಬೈದಾಗ ಅಪ್ಪ ಬೈದಿದ್ದಾರೆ, ಪ್ರೀತಿ ಮಾಡಿದಾಗ ಅಮ್ಮ ಮಾಡಿದ್ದಾರೆ ಅಂತ ಅಂದುಕೋ ಅಂತ ಚಿಕ್ಕವಳಿದ್ದಾಗ ಹೇಳಿದ್ದೇನೆ. ಅವಳಿಗೆ ಮೂರ್ನಾಲ್ಕು ವರ್ಷ ಇದ್ದಾಗಲೇ ಹೇಳಿದ್ದೆ, 'ನಾನು ಮದುವೆಯಾಗಿಲ್ಲ' ಅಂತ. ಆದರೆ, ಅವಳಿಗೆ ಅಪ್ಪ ಇದ್ದಾರೆ ಅಂತ ಹೇಳಿದ್ದೆ. ಶಾಲೆಯಲ್ಲಿ ಅವಳಿಗೆ ಕೆಲವರು ನಿಮ್ಮಮ್ಮ ಮದುವೆಯಾಗಿಲ್ಲ ಅಂತ ಕೇಳಿದ್ದರಂತೆ. ಆಗ ಅವಳು ನನಗೆ ಬಂದು ಕೇಳಿದ್ಲು. ಹೌದು. ಮದುವೆಯಾಗಿಲ್ಲ. ಸಿಂಗಲ್ ಪೇರೆಂಟ್ ಅಂತ ಹೇಳಿದೆ. ಅವಳೂ ಅದನ್ನು ಅರ್ಥ ಮಾಡಿಕೊಂಡಳು. ಅವರಪ್ಪ ರಾಬರ್ಟ್ ಆಗಾಗ ಇಶಾಳನ್ನು ಭೇಟಿ ಮಾಡ್ತಾರೆ. ಫೋನ್ ಮಾಡಿ ಮಾತಾಡ್ತಾ ಇರ್ತಾರೆ. ರಾಬರ್ಟ್ ಮತ್ತು ನನ್ನ ನಡುವೆ ಯಾವ ಸಂಬಂಧವೂ ಇಲ್ಲ. ಆದರೆ, ಒಳ್ಳೆಯ ಸ್ನೇಹಿತರಾಗಿದ್ದೇವೆ.

ಇಶಾ ತುಂಬಾ ಬುದ್ಧಿವಂತೆ, ಪ್ರಬುದ್ಧೆ. ಅವಳಿಗೆ ರಾಜಕೀಯ ಜ್ಞಾನವಿದೆ, ರಂಗಭೂಮಿ, ಸಿನಿಮಾ ಒಡನಾಟವಿದೆ. ಎಲ್ಲಕ್ಕಿಂತ ಮುಖ್ಯವಾಗಿ ಅವಳು ಒಳ್ಳೆಯ ಮನುಷ್ಯಳು. ಅವಳು ರ್‍ಯಾಂಕ್ ಬರಬೇಕು ಎಂದು ನಾನು ಎಂದೂ ಬಯಸಲಿಲ್ಲ. ಅವಳಿಗೆ ಎಲ್ಲ ಥರದ ಜೀವನದ ಅರಿವು ಮಾಡಿಕೊಟ್ಟಿದ್ದೇನೆ. ಅವಳು ಕಾಡಿನಲ್ಲೂ, ಫೈವ್ ಸ್ಟಾರ್ ಹೋಟೆಲಿನಲ್ಲೂ ಕಂಫರ್ಟ್ ಆಗಿ ಇರಬಲ್ಲಳು. ಆ ರೀತಿ ಬೆಳೆಸಿದ್ದೇನೆ. ಅವಳು ನನ್ನ ಹೊಟ್ಟೆಯಲ್ಲಿದ್ದಾಗಿನಿಂದಲೇ ನಾನು ಹೋದಲೆಲ್ಲಾ ಅವಳನ್ನು ಕರೆದೊಯ್ದಿದ್ದೇನೆ. ಜನರ, ಪರಿಸರದ ಒಡನಾಟದಿಂದ ಅವಳು ಬಹಳಷ್ಟು ಕಲಿತಿದ್ದಾಳೆ. ಪ್ರಾಣಿಗಳು, ಮನುಷ್ಯರನ್ನು ಪ್ರೀತಿಸುವ ಗುಣ ಅವಳಲ್ಲಿದೆ. ಎಲ್ಲರನ್ನೂ ಸಮಾನವಾಗಿ ನೋಡುವ, ಎಲ್ಲರೊಂದಿಗೆ ಬೆರೆಯುವ ಮನಸು ಅವಳದ್ದು. ಅವಳು ಸದಾ ಖುಷಿಯಾಗಿ ಇರಬೇಕೆಂಬುದೇ ನನ್ನಾಸೆ. ಅವಳು ನನ್ನ ಒಳ್ಳೆಯ ಗೆಳತಿ ಕೂಡ. ಅವಳಿಂದ ಏನನ್ನೂ ಮುಚ್ಚಿಟ್ಟಿಲ್ಲ. ಇಬ್ಬರೂ ಮುಕ್ತವಾಗಿದ್ದೇವೆ. ಅವಳ ಬಗ್ಗೆ ತಂದೆ–ತಾಯಿ ಎರಡೂ ಆಗಿ ನನಗೆ ಹೆಮ್ಮೆ ಇದೆ.

ಒಂಟಿ ತಾಯಂದಿರು ಆರ್ಥಿಕವಾಗಿ ಸಬಲವಾಗಿರಬೇಕು ನಿಜ. ಆದರೆ, ಮಕ್ಕಳನ್ನು ಬೆಳೆಸಲು ಆರ್ಥಿಕ ಸ್ಥಿತಿಯೊಂದೇ ಮುಖ್ಯವಾಗುವುದಿಲ್ಲ ಅನ್ನೋದು ನನ್ನ ನಂಬಿಕೆ. ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದೀವಿ ಅಂದಾಕ್ಷಣ ಎಲ್ಲವೂ ಚೆನ್ನಾಗಿರುತ್ತದೆ ಅಂದಲ್ಲ. ನನ್ನ ಸುತ್ತಮುತ್ತಲಿರುವ ಅನೇಕ ಹೆಂಗಸರು, ಗಂಡ ಇದ್ದರೂ ಇಲ್ಲದಂತಿದ್ದಾರೆ. ಮನೆ ಕೆಲಸ ಮಾಡುವವರು, ಕೂಲಿ ಮಾಡುವವರು, ಸಣ್ಣ ಸಣ್ಣ ಕೆಲಸ ಮಾಡುವವರು. ಈ ಮಹಿಳೆಯರು ಎಷ್ಟೆಲ್ಲ ಕಷ್ಟಪಟ್ಟು ಮಕ್ಕಳನ್ನು ಬೆಳೆಸಿ, ಓದಿಸಲು ಹೆಣಗುತ್ತಾರೆ. ಅವರನ್ನು ದೊಡ್ಡವರನ್ನಾಗಿ ಮಾಡಿ ಒಳ್ಳೆಯ ನಾಗರಿಕನ್ನಾಗಿ ಮಾಡಬೇಕೆಂದು ಶ್ರಮ ಪಡುತ್ತಾರೆ. ಇವರಿಗೂ ನಮಗೂ ವ್ಯತ್ಯಾಸವಿಲ್ಲ. ನಾನು ಲೈಮ್‌ಲೈಟ್‌ನಲ್ಲಿ ಇರಬಹುದಷ್ಟೇ. ಆದರೆ, ಹೆಣ್ಣಾಗಿ ನನ್ನ ಮತ್ತು ಅವರ ಸ್ಥಿತಿ ಒಂದೇ. ಸವಾಲುಗಳು ಬೇರೆ ಬೇರೆ ಇರಬಹುದು.

ಒಮ್ಮೆ ಗೌರಿ, ಯು.ಆರ್. ಅನಂತಮೂರ್ತಿ ಅವರಿಗೆ 'ಕವಿತಾ ಸಿಂಗಲ್ ಪೇರೆಂಟ್' ಅಂತ ಹೇಳಿದಾಗ, 'ಶೇ. 90ರಷ್ಟು ಭಾರತೀಯ ಮಹಿಳೆಯರು ಸಿಂಗಲ್ ಪೇರೆಂಟ್ಸ್. ನಾವು ಗಂಡಸರು ಮಗು ದೊಡ್ಡದಾದ ಮೇಲಷ್ಟೇ ಮಕ್ಕಳ ಒಡನಾಟಕ್ಕೆ ಬರುತ್ತೇವೆ. ಅಲ್ಲಿಯ ತನಕ ಎಲ್ಲವನ್ನೂ ಹೆಗಲ ಮೇಲೆ ಹೊತ್ತು ನಿರ್ವಹಿಸುವವರು ಹೆಣ್ಣುಮಕ್ಕಳೇ' ಅಂತ ಹೇಳಿದ್ದರು. ಆ ಮಾತನ್ನು ನಾನು ಯಾವಾಗಲೂ ನೆನಪಿಸಿಕೊಳ್ಳುವೆ. ನಾನು ಸಿಂಗಲ್ ಮದರ್ ಆಗಿದ್ದು ದೊಡ್ಡ ಸಾಧನೆಯೇನಲ್ಲ. ಅನಿವಾರ್ಯತೆ ಇತ್ತು, ಆಯ್ಕೆ ಮಾಡಿಕೊಂಡೆ. ನನ್ನಂತೆಯೇ ಅನೇಕ ತಾಯಂದಿರು ನಮ್ಮ ನಡುವೆ ಇದ್ದಾರೆ.

ಸಿಂಗಲ್ ಮದರ್ ಆಗಿದ್ದಾಗ ಪ್ರತಿ ಸಂಗತಿಯೂ ದೊಡ್ಡ ಸವಾಲೇ. ನಾವೂ ಗಂಡಸರಂತೆ ಕುದುರೆ ಕಣ್ಣಿಗೆ ಪಟ್ಟಿ ಕಟ್ಟಿದಂತೆ ಫೋಕಸ್ಡ್ ಆಗಿರಬೇಕು. ಆಗ ಮಾತ್ರ ಸಮಾಜದ ಮಾತುಗಳಿಗೆ ತಲೆ ಕೆಡಿಸಿಕೊಳ್ಳದೇ ಇರಲು ಸಾಧ್ಯ. ನನ್ನನ್ನು ನೋಡಿ ತುಂಬಾ ಜನ 'ನೀವು ಧೈರ್ಯವಂತೆ. ನಾವೂ ಸಿಂಗಲ್ ಮದರ್ ಆಗಬೇಕು' ಅಂತ ಹೇಳುತ್ತಾರೆ. ಆದರೆ, ನಾನು ಅವರಿಗೆ ಹೇಳೋದು ಇಷ್ಟೇ: 'ನಿಮಗೆ ಪ್ರೀತಿ ಸಿಕ್ಕರೆ, ಒಳ್ಳೆಯ ಗಂಡು ಸಿಕ್ಕರೆ ಮದುವೆಯಾಗಿ. ನಾನು ಅನಿವಾರ್ಯವಾಗಿ ಸಿಂಗಲ್ ಮದರ್ ಆದೆ ಅಷ್ಟೇ. ಪರಿಸ್ಥಿತಿ, ಸಂದರ್ಭಗಳು ಬಂದರೆ ಸಿಂಗಲ್ ಮದರ್ ಆದರೆ ತಪ್ಪೇನಿಲ್ಲ' ಅನ್ನೋದು ನನ್ನ ಅಭಿಪ್ರಾಯ. ನನಗೆ ಮಗು ಬೇಕಿತ್ತು. ನಾನು ಮಗು ಮಾಡಿಕೊಂಡೆ ಅಷ್ಟೇ.

ಪ್ರತಿಕ್ರಿಯಿಸಿ: **feedback@sudha.co.in**